ಶ್ರೀ ಸಿ. ಎಸ್. ಹುಲುಕೋಟಿ.—ಪ್ಲಾನು ಮತ್ತು ಎಸ್ಟಿಮೇಟುಗಳು ಯಾವ್ಯಾವುಗಳಿಗೆ ಆಗಿವೆ ?

ಶ್ರೀ ಆಲೂರು ಹನುಮಂತಪ್ಪ.—ಇಲ್ಲಿ ಕೊಟ್ಟಿರುವ ಗದಗ್ ತಾಲ್ಲೂಕಿನ ಕಣವಿ ಕೆರೆಗೆ ಎಸ್ಟಿಮೇಟ್ ಆಗಿದೆ, 1 ಲಕ್ಷ 84 ಸಾವಿರದ 240 ರೂಪಾಯಿಗಳಿಗೆ.

ಶ್ರೀ ಸಿ. ಎಸ್. ಹುಲುಕೋಟಿ.—ಇಲ್ಲಿ ಕೊಟ್ಟಿರುವ ಮಿಕ್ಕ ಕೆರೆಗಳ ಎಸ್ಟಿಮೇಟ್ ಆಗಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—Rough Estimates ಆಗಿವೆ. Investigation Stage ನಲ್ಲಿವೆ. ಇನ್ನು ಪೂರ್ತಿಯಾಗಿಲ್ಲ.

ಶ್ರೀ ಸಿ. ಎಸ್. ಹುಲುಕೋಟಿ.—ಹಿರೇವಡಟ್ಟಿ ಕೆರೆಯ ಎಸ್ಟಿಮೇಟ್ ಎಷ್ಟು ? ಎಷ್ಟು ಎಕರೆ ಸಾಗು ವಳಿಗೆ ಬರುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—6,72,211 ರೂಪಾಯಿಗಳ ಅಂದಾಜಿನಲ್ಲಿ 220 ಎಕರೆಗಳು ಸಾಗಿಗೆ ಬರುತ್ತವೆ.

ಶ್ರೀ ಸಿ. ಎಸ್. ಹುಲುಕೋಟಿ.—ಕೋಲೂರು ಕೆರೆಯ ಸರ್ವೆ, ಪ್ಲಾನು, ಎಸ್ಟಿಮೇಟ್ ಆಗಿದೆಯೇ ಇಲ್ಲವೇ ಏಕೆ ಹೇಳಿಲ್ಲ ?

ಶ್ರೀ ಆಲೂರು ಹನುಮಂತಪ್ಪ.—It is found not feasible.

ಶ್ರೀ ಸಿ. ಎಸ್. ಹುಲುಕೋಟಿ.—ಅದು Scarcity area ದಲ್ಲಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಹೌದ, ಬಂದಿದೆ.

ಶ್ರೀ ಸಿ. ಎಸ್. ಹುಲುಕೋಟಿ.—ಯಾವಾಗ ಈ ಕೆರೆಗಳನ್ನು ತೀವ್ರವಾಗಿ ಕೈಕೊಳ್ಳುವಿರಿ ?

ಶ್ರೀ ಆಲೂರು ಹನುಮಂತಪ್ಪ.—Consider ಮಾಡುತ್ತಿದ್ದೇವೆ. Scarcity area ಆಗಿರುವುದರಿಂದ ಸ್ವಲ್ಪಮಟ್ಟಿಗೆ Percentage Return ಕಡಮೆಯಾದರೂ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ.

ಶ್ರೀ ಸಿ. ಎಸ್. ಹುಲುಕೋಟಿ.—ಮುಂದುವಾಡಿ ಕೆರೆಗೆ ಎಸ್ಟಿಮೇಟ್ ಎಷ್ಟು ? ಎಷ್ಟು ಎಕರೆಗೆ ಆಗುತ್ತದೆ.

ಶ್ರೀ ಆಲೂರು ಹನುಮಂತಪ್ಪ.—12 ಲಕ್ಷ ರೂಪಾಯಿಗಳು; 1,825 ಎಕರೆಗಳು ಸಾಗಿಗೆ ಬರುತ್ತವೆ.

ಶ್ರೀ ಸಿ. ಎಸ್. ಹುಲುಕೋಟಿ.—ಮಾಸ್ತಿ ಕೊಪ್ಪದ ಕೆರೆಗೆ ಎಸ್ಟಿಮೇಟು ಎಷ್ಟು ? ಎಷ್ಟು ಎಕರೆಗೆ ಅನುಕೂಲವಾಗುತ್ತದೆ ?

ಶ್ರೀ ಆಲೂರು ಹನುಮಂತಪ್ಪ.—2,30,920 ರೂಪಾಯಿಗಳಿಗೆ ಅಂದಾಜಾಗಿದೆ. 176 ಎಕರೆ ಸಾಗಾಗುತ್ತದೆ.

ಶ್ರೀ ಸಿ. ಎಸ್ ಹುಲುಕೋಟಿ.—ಅಡವಿ ಸೋಮಪುರದ್ದು ?

ಶ್ರೀ ಆಲೂರು ಹನುಮಂತಪ್ಪ.—1,56,448 ರೂಪಾಯಿಗಳಿಗೆ ಅಂದಾಜಾಗಿದೆ. 118 ಎಕರೆಗಳು ಸಾಗಾಗುತ್ತವೆ.

Extent of land under wet cultivation in Reserved Forest Areas of South Coorg Circle.

*Q.—369. Sri A. P. APPANNA (Virajpet).—

Will the Government be pleased to state :—

(*a*) the extent of acres of land under wet cultivation (paddy) in reserved forest areas in South Coorg Circle ;

(*b*) who are the people cultivating those lands ;

(*c*) since how long they have been cultivating these lands ;

(*d*) whether Government have issued any orders prohibiting these people from cultivating these lands ;

(*e*) if not, whether they are aware that the District Forest Officer of Coorg Circle has ordered these cultivators not to cultivate these lands with paddy from this season ?

A.—Sri B. RACHIAH (Minister for Forests and Fisheries).—

(*a*) About 400 acres.

(*b*) Forest Labourers like Kadu Kurubas, Yeravar and others.

(*c*) Since 10 years. In some cases less.

(*d*) Government have taken action in a few cases where there was unauthorised cultivation.

(*e*) Does not arise in view of reply to clause (*d*) above.

Sri A. P. APPANNA.—Sir, the Hon'ble Minister has stated that 400 acres of land have been under cultivation. Whether this 400 acres is unauthorised or authorised land ?

Sri B. RACHIAH.—Out of this 400 acres, 40 acres have been given under lease, 250 acres have been permitted by the Forest Department to be cultivated and the remaining 110 acres are unauthorised cultivation.

Sri A. P. APPANNA.—What is the policy of the Government regarding these lands which are under unauthorised cultivation by individuals for more than 10 years ? Whether these lands would be granted to them or cultivations would be evicted ?

Sri B. RACHIAH.—The policy of the Forest Department is that we cannot permit cultivation within the State Forests as it will endanger the wealth of the forest.

Sri G. V. GOWDA.—May I know who are the unauthorised cultivators in respect of these 110 acres ?

Sri B. RACHIAH.—These 110 acres have been cultivated by persons other than Kadukurubas and Soligas, who do authorised work.

ಶ್ರೀ ಕೆ. ಲಕ್ಕಪ್ಪ.—ಸ್ವಾಮಿ, ಅರಣ್ಯ ಕೂಲಿಗಾರರಾದ ಕಾಡು ಕುರುಬರು, ಎರವರು ಮತ್ತು ಇತರೆಯವರು ಇವರಿಗೆ ಎಷ್ಟೆಷ್ಟು ಎಕರೆ ಭೂಮಿ ಪ್ರತಿಯೊಬ್ಬರಿಗೆ ಸಾಗುವಳಿಗೆ ಕೊಟ್ಟಿದ್ದೀರಿ ?

ಶ್ರೀ ಬಿ. ರಾಚಯ್ಯ.—ಪ್ರತಿಯೊಬ್ಬರ ವಿವರ ನನ್ನ ಹತ್ತಿರವಿಲ್ಲ. ಆದರೆ ಈ ಮೂರು ತರಗತಿಯವರು ಒಟ್ಟಿಗೆ ಸೇರಿ 250 ಎಕರೆ ಸಾಗುವಳಿ ಮಾಡುತ್ತಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅನಧಿಕೃತ ಸಾಗುವಳಿಯಾಗಿರುವಂತಹ ಜಮೀನು 110 ಎಕರೆ ಅಷ್ಟೇ ಇದೆಯೋ ಅಥವಾ ಹೆಚ್ಚಿಗೆ ಇದೆಯೋ ?

ಶ್ರೀ ಬಿ. ರಾಚಯ್ಯ.—ನನ್ನ ಹತ್ತಿರವಿರುವ ಅಂಕಿ ಸಂಖ್ಯೆಗಳ ಪ್ರಕಾರ 110 ಎಕರೆ ಮಾತ್ರ ಎಂದಿದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಒಂದು ವೇಳೆ ಅನಧಿಕೃತ ಸಾಗುವಳಿಯಾದಂಥ ಜಮೀನು ಹೆಚ್ಚಿಗೆ ಇದ್ದರೆ, ಅದನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರು ಯಾರು ಎನ್ನುವುದನ್ನು ಸರಕಾರ investigation ಮಾಡುತ್ತಾರೆಯೇ ?

Sri B. RACHIAH.—It is purely a hypothetical question, Sir.

Mr. SPEAKER.— I call it a hypothetical supplementary.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೂ ಹೆಚ್ಚಿಗೆ ಜಮೀನು ಬಗರ್ ಹುಕುಂ ಸಾಗುವಳಿ ನಡೆದಿದೆ ಎನ್ನುವುದಕ್ಕೆ ವಿಚಾರಣೆ ನಡೆಸುತ್ತೀರಾ ?

ಶ್ರೀ ಬಿ. ರಾಚಯ್ಯ.—ಸುಮಾರು 400 ಎಕರೆ ಮಾತ್ರ ಎಂದು ರಿಪೋರ್ಟು ಬಂದಿದೆ. ಅದನ್ನು ನಂಬಬೇಕಾಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಬಗರ್ ಹುಕುಂ ಸಾಗುವಳಿ ಮಾಡುವವರು ಕಂದಾಯ ಕೊಟ್ಟಿದ್ದಾರೆಯೇ ಅಥವಾ ಅವರ ಮೇಲೆ ಏನಾದರೂ ಜುಲ್ಮಾನೆ ವಿಧಿಸಿದ್ದೀರಾ ?

ಶ್ರೀ ಬಿ. ರಾಚಯ್ಯ.—110 ಎಕರೆ ಜಮೀನು ಬಿಟ್ಟು ಉಳಿದಿರುವುದಕ್ಕೆ ಮುಟ್ಟುಗೋಲು ಹಾಕಿದೆ. ಅದನ್ನು ಇಲಾಖೆಯವರು ಗೊತ್ತುಪಡಿಸಿದ ಹಾಗೆ ಟಿ-ಟಿ-ಹಾಕಿ, ಜುಲ್ಮಾನೆ ಹಾಕಿದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಅವರು ಸರಕಾರಕ್ಕೆ ಕಂದಾಯ ಕೊಟ್ಟಿದ್ದಾರೆಯೇ ?

ಶ್ರೀ ಬಿ. ರಾಚಯ್ಯ.—ಅವರ ಮೇಲೆ ಜುಲ್ಮಾನೆ ಹಾಕಿದೆ ಮತ್ತು ಕೂಡಲೆ ಎವಿಕ್ಟ್ ಮಾಡಬೇಕೆಂದು ಆರ್ಡರ್ ಮಾಡಿದೆ.

ಶ್ರೀ ಕೆ. ಎಚ್. ರಂಗನಾಥ್.—ಬಗರ್ ಹುಕುಂ ಸಾಗುವಳಿ ಮಾಡಲಾಗಿದೆಂದು ಸರಕಾರದ ಗಮನಕ್ಕೆ ಯಾವಾಗ ಬಂದಿದೆ ?

ಶ್ರೀ ಬಿ. ರಾಚಯ್ಯ.—1959ನೇ ಇಸವಿಯಲ್ಲಿ ಬಂದಿದೆ.

Sri G. V. GOWDA.—Is it not a fact that the cultivation of these 400 acres had not affected in any way the Reserved Forest there ?

ಶ್ರೀ ಬಿ. ರಾಚಯ್ಯ.—ಫಾರೆಸ್ಟ್ ಇಲಾಖೆಯಲ್ಲಿ ಕೆಲಸ ಮಾಡುವ ಕಾಡು ಕುರುಬರು, ಎರವರು ಮತ್ತು ಇತರೆಯವರು ಅಂದರೆ ಈ ಮೂರು ಜನಕ್ಕೆ ಸಾಗುವಳಿ ಮಾಡುವುದಕ್ಕೆ ಅವಕಾಶ ಮಾಡಿ ಕೊಡುತ್ತಾರೆ. ಆದರೆ ಬೇರೆಯವರು ಸಾಗುವಳಿ ಮಾಡಿದರೆ ತೊಂದರೆಯಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಜಮೀನು ಸ್ವಾಧೀನಕ್ಕೆ ತೆಗೆದುಕೊಂಡು ಬಗರ್ ಹುಕುಂ ಸಾಗುವಳಿ ಮಾಡಿದವರು ಕೇರಳದಿಂದ ಬಂದಿರತಕ್ಕ ಜನ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ. ರಾಚಯ್ಯ.—ಅಲ್ಲಿಯ ಕಾಡು ಕುರುಬರು, ಎರವರು ಮುಂತಾದವರು ಬಗರ್ ಹುಕುಂ ಸಾಗುವಳಿ ಮಾಡಿದ್ದಾರೆ ಎನ್ನುವುದು ಮಾತ್ರ ಗಮನಕ್ಕೆ ಬಂದಿದೆ.

ಶ್ರೀ ಎ. ಪಿ. ಅಪ್ಪಣ್ಣ.—ಕಾಫೀ ತೋಟಗಳಲ್ಲಿ ಕೆಲಸ ಮಾಡಲು ಹೊರಗಡೆಯಿಂದ ಕಾಡು ಕುರುಬರು, ಕೂಲಿಗಾರರು ಬರುತ್ತಾರೆ ಅಲ್ಲವೆ ?

ಶ್ರೀ ಬಿ. ರಾಚಯ್ಯ.—ಕೂಲಿ ಕೆಲಸ ಮಾಡಲು ಬರುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ —ಅವರಿಗೆ ಜಮೀನು ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಬಿ. ರಾಚಯ್ಯ.—ಕೇಳಿದರೆ ಕೊಡುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇಲ್ಲಿರುವ ಸಾವಿರಾರು ಜನರಿಗೆ ಸಾಗುವಳಿಗೆ ಜಮೀನು ಕೊಡಲು ಸ್ಯಾಂಕ್ಷನ್ ಮಾಡಿಲ್ಲ ಆದರೆ ಹೊರಗಿನಿಂದ ಬಂದ ಕೂಲಿಗಾರರಿಗೆ ಸಾಗುವಳಿ ಮಾಡುವುದಕ್ಕೆ ಜಮೀನನ್ನು ಸ್ಯಾಂಕ್ಷನ್ ಮಾಡಲು ಕಾರಣವೇನು, ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಇವರೂ ನಮ್ಮ ದೇಶದಲ್ಲರ ತಕ್ಕ ಜನ.

ಶ್ರೀ ಕೆ. ಲಕ್ಕಪ್ಪ.—ಹೊರಗಿನಿಂದ ಬಂದಿರತಕ್ಕವರು ಎಷ್ಟು ಜನ ಉಳುಮೆ ಮಾಡುತ್ತಿದ್ದಾರೆ ?

ಶ್ರೀ ಬಿ. ರಾಚಯ್ಯ.—ಎಷ್ಟು ಜನ ಎಂಬ ವಿವರ ಗಳಿಲ್ಲ. ಆದರೆ 110 ಎಕರೆ ಸಾಗುವಳಿ ಮಾಡಿದ ಜಮೀನು ಇದೆ.

ಶ್ರೀ ಕೆ. ಎಚ್. ರಂಗನಾಥ್.—ಇದಕ್ಕೂ ಮೊದಲು ಸೌತ್ ಕೂರ್ಗ್ ನರ್ಕಲ್ಲಿನಲ್ಲಿ ಫಾರೆಸ್ಟ್ ಅಧಿಕಾರಿಗಳು ಇರಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಇದ್ದರು.

Sri C. J. MUCKANNAPPA.—In the answer it is stated that Government have taken action in a few cases where there was unauthorised cultivation, for eviction. I want to know whether Government have issued any orders in this behalf ?

Sri B. RACHIAH.—I have made it clear that out of the 400 acres, 40 acres have been given under lease, 250 acres have been permitted by the Forest

(SRI B. RACHIAH)

Department to be cultivated and the remaining 110 acres are unauthorised cultivation, and in these 110 acres we have asked the Department to evict the unauthorised cultivators.

Sri C. J. MUCKANNAPPA.—In how many cases action has been taken for eviction ?

Mr. SPEAKER.—The Hon'ble Minister has already stated that he is unable to give that information now. That happened in the year 1959 and I am not prepared to hear arguments now.

Sri C. J. MUCKANNAPPA.—Sir, I want to know the orders of Government in regard to these 110 acres of unauthorised cultivation.

Sri B. RACHIAH.—Government have ordered to evict all people who are doing unauthorised cultivation in these 110 acres.

Construction of a Town Hall at Ajjampur.

*Q.—565. **Sri T. R. PARAMESWARAIAH** (Tarikere).—

Will the Government be pleased to state :—

(*a*) when the construction of Town Hall at Ajjampur was entrusted to private contractor ;

(*b*) whether the Municipality has resolved that there is considerable delay in the construction and hence it is incurring loss ;

(*c*) whether it is a fact that the contractor was warned in this behalf once ?

A.—**Sri B. D. JATTI** (Minister for Finance) [On behalf of SRI VEERENDRA PATIL (Minister for Public Works)].—

(*a*) On 8th February 1960.

(*b*) Yes.

(*c*) Yes.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಸ್ವಾಮಿ, ಈ ಕೆಲಸಕ್ಕೆ ಟೆಂಡರ್ ಯಾವಾಗ ಕರೆಯಲಾಯಿತು ? ಯಾವಾಗ ಒಪ್ಪಿಕೊಳ್ಳಲಾಯಿತು ?

Sri B. D. JATTI.—As per the contract agreement, the work of construction was to commence from 1st January 1960.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಟೆಂಡರ್ ಯಾವಾಗ ಕರೆಯಲಾಯಿತು ?

Sri B. D. JATTI.—I have no date regarding the tenders.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಈ ಕೆಲಸ ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ?

Sri B. D. JATTI.—It was the fault of the contractor. He could not complete. So, notice has been issued by the Government that the work may be started early and he has started.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಈ ಕೆಲಸ ಯಾವ ಕಾಲದಲ್ಲಿ ಮುಗಿಸಬೇಕು ಎಂದು ಕಂಟ್ರಾಕ್ಟ್ ನಲ್ಲಿ ಕಂಡೀಷನ್ ಇದೆ ?

Sri B. D. JATTI.—According to the original contract, he has not fulfilled the condition. So notice was issued again and a new date has been given that is 31st December 1962 and he has nearly completed.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಸ್ವಾಮಿ, ಮುನಿಸಿಪಾಲಿಟಿಯವರಿಗೆ ನಷ್ಟವಾಗುತ್ತಿದೆ. ಬೇಗನೆ ಕಳಿಸಿಕೊಡಬೇಕು ಎಂದು ಸರಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ ? ಹಾಗಿದ್ದರೆ ಅದರ ಪ್ರಕಾರ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

Sri B. D. JATTI.—That is a different issue altogether. This is with regard to the construction and completion of the work.

Sri K. LAKKAPPA.—Who are the other contractors who had filed their tenders ?

Mr. SPEAKER.—How does it arise ?

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಂಟ್ರಾಕ್ಟ್ ಕೆಲಸ ಕೊಟ್ಟಿದ್ದೀರಲ್ಲ, ಅವರು A, B, C, ವರ್ಗದಲ್ಲಿ ಯಾವ ವರ್ಗಕ್ಕೆ ಸೇರಿದವರು ? ಅವರಿಂದ ಡಿಪಾಜಿಟ್ ಎಷ್ಟು ತೆಗೆದುಕೊಂಡಿದ್ದೀರಾ ?

ಶ್ರೀ ಬಿ. ಡಿ. ಜತ್ತಿ.—ಎಲ್ಲಾ ಶಾಸ್ತ್ರಗಳನ್ನು ಅನುಸರಿಸಿಕೊಂಡು ಡಿಪಾಜಿಟ್ ತೆಗೆದುಕೊಂಡು ಮಾಡಲಾಗಿದೆ. ಕೆಲಸ ಬೇಗನೇ ಮುಗಿಯಬೇಕೆಂದು ಹೇಳಿದೆವು. ಅದು ಮುಗಿಯುತ್ತಾ ಬಂದಿದೆ. ಡಿಸೆಂಬರ್ 31ನೇ ತಾರೀಖು 1962 ರೊಳಗೆ ಪೂರ್ತಿಯಾಗಿ ಮುಗಿಯುತ್ತದೆ.

Sri S. M. KRISHNA.—Has the contractor given reasons for the delay ?

Sri B. D. JATTI.—The reason given was the delay in procuring angle iron for manufacturing steel stresses required for the building.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಂಟ್ರಾಕ್ಟ್ ಕೆಲಸ ಪೂರ್ತಿಯಾದೇ ಇರುವ ನಂದರ್ಭವಿರುವುದರಿಂದ ಡಿಪಾಜಿಟ್ ಹಣಕ್ಕೆ ಮುಟ್ಟುಗೋಲು ಹಾಕಿ ಸರಕಾರ ವಶಪಡಿಸಿಕೊಳ್ಳುತ್ತದೆಯೇ ?

ಶ್ರೀ ಬಿ. ಡಿ. ಜತ್ತಿ.—ಅದರ ಅವಧಿ ಎಷ್ಟು ಎಂಬುದು ನನಗೆ ಗೊತ್ತಿಲ್ಲ.